# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 663 (744) |
| ಉತ್ತರಿಸಬೇಕಾದ ದಿನಾಂಕ | 13-07-2023 |
| ಉತ್ತರಿಸ ಬೇಕಾದವರು | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಂಗಾರಪೇಟೆ, ಕೋಲಾರ, ಮಾಲೂರು ಸ್ಥಳಗಳಲ್ಲಿ ಕುಡಿಯುವ ನೀರಿಗಾಗಿ ನಿರ್ಮಿಸಲಾಗುತ್ತಿರುವ "ಯರಗೋಳ್" ಯೋಜನೆಯ ಉದ್ದೇಶಗಳೇನು; (ವಿವರಗಳನ್ನು ನೀಡುವುದು) | ಕೋಲಾರ ನಗರ, ಮಾಲೂರು ಪಟ್ಟಣ, ಬಂಗಾರಪೇಟೆ ಪಟ್ಟಣ ಮತ್ತು ಮಾರ್ಗ ಮಧ್ಯದ 45 ಗ್ರಾಮಗಳ ಜನತೆಗೆ ಕುಡಿಯುವ ನೀರು ಒದಗಿಸಲು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಯರಗೋಳ್ ಗ್ರಾಮದ ಸಮೀಪ ಅಣೆಕಟ್ಟನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. 2039ರ ಇಸವಿಗೆ ಅಂದಾಜಿಸಲಾದ ಕೋಲಾರ ನಗರದ ಜನಸಂಖ್ಯೆ 204147 ಗೆ ದಿನಂಪ್ರತಿ 100 ಲೀಟರ್ ನಂತೆ, ಬಂಗಾರಪೇಟೆ ಪಟ್ಟಣದ ಜನಸಂಖ್ಯೆ 89703 ಗೆ ದಿನಂಪ್ರತಿ 70 ಲೀಟರ್ ನಂತೆ ಮತ್ತು ಮಾಲೂರು ಪಟ್ಟಣದ ಜನಸಂಖ್ಯೆ 50075 ಗೆ ದಿನಂಪ್ರತಿ 70 ಲೀಟರ್ ನಂತೆ ಹಾಗೂ ಮಾರ್ಗಮಧ್ಯದ 45 ಗ್ರಾಮಗಳ ಅಂದಾಜಿಸಲಾದ ಜನಸಂಖ್ಯೆ 53646 ಗೆ ದಿನಂಪ್ರತಿ 40 ಲೀಟರ್ ನಂತೆ ಶುದ್ದೀಕರಿಸಿದ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ. |
| ಆ) | ಈ ಯೋಜನೆ ಪ್ರಾರಂಭವಾದಾಗಿನಿಂದ ಈವರೆವಿಗೂ ಸರ್ಕಾರವು ವೆಚ್ಚ ಮಾಡಲಾಗಿರುವ ಹಣ ಎಷ್ಟು; (ರಾಜ್ಯ ಮತ್ತು ಕೇಂದ್ರದ ಪಾಲುಗಳನ್ನು ನಮೂದಿಸುವುದು) | ಮೇಲಿನ ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದಿಂದ ಎರಡು ಹಂತಗಳಲ್ಲಿ ಅನುಮೋದನೆಯನ್ನು ನೀಡಲಾಗಿದ್ದು ವಿವರಗಳು ಈ ಕೆಳಗಿನಂತಿದೆ.<br><br>ಅ) ಮೊದಲನೇ ಹಂತದ ಕಾಮಗಾರಿಗಳು :- ಸರ್ಕಾರದ ಆದೇಶ ಸಂಖ್ಯೆ ನಅಇ 26 ಯುಡಬ್ಲ್ಯುಎಸ್ 2006 ದಿನಾಂಕ 22-08-2007 ರಲ್ಲಿ 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟು ಹಾಗೂ ಜಾಕ್‌ವೆಲ್ ನಿರ್ಮಿಸುವ ಮತ್ತು ಏರು ಕೊಳವೆ ಮಾರ್ಗ, ಸಂಪರ್ಕ ರಸ್ತೆ ಹಾಗೂ ಪೂರಕ ಕಾಮಗಾರಿಗಳನ್ನು ಕೈಗೊಳ್ಳಲು ರೂ.160.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಅಣೆಕಟ್ಟೆ ಕಾಮಗಾರಿಯು ದಿ:30-09-2020 ರಂದು ಪೂರ್ಣಗೊಂಡಿದ್ದು ಹಾಲಿ ಪೂರ್ಣಪ್ರಮಾಣದಲ್ಲಿ ನೀರಿನ ಶೇಖರಣೆ ಇರುತ್ತದೆ. ಪಂಪಿಂಗ್ ಮೆಶಿನರಿ ಹಾಗೂ ಪೈಪ್ ಲೈನ್ ಕಾಮಗಾರಿಗಳನ್ನು ಪರೀಕ್ಷಾರ್ತಕವಾಗಿ ಚಾಲನೆಗೊಳಿಸಲಾಗುತ್ತಿದೆ<br><br>ಸದರಿ ಯೋಜನೆಯ ವೆಚ್ಚವನ್ನು ರೂ.180.70 ಕೋಟಿಗಳಿಗೆ ಪರಿಷ್ಕರಿಸಲಾಗಿದ್ದು, ಆಡಳಿತಾತ್ಮಕ ಅನುಮೋದನೆ ನೀಡಲು ಪರಿಶೀಲಿಸಲಾತ್ತಿದೆ. |

ರಾಜ್ಯ ಸರ್ಕಾರದ ಅನುದಾನದ ವಿವರಗಳು ಈ ಕೆಳಗಿನಂತಿದೆ.

**ರೂ.ಲಕ್ಷಗಳಲ್ಲಿ**

| ಕ್ರ. ಸಂ | ವಿವರ | ಮೂಲ ಅಂದಾಜಿ ನಂತೆ | ಪರಿಷ್ಕೃತ ಅಂದಾಜಿ ನಂತೆ | ಬಿಡುಗಡೆ ಯಾದ ಮೊತ್ತ |
|---|---|---|---|---|
| 1 | ಕರ್ನಾಟಕ ಸರ್ಕಾರದ ಅನುದಾನ | 4344.31 | 4906.35 | 4344.31 |
| 2 | ಆರ್ಥಿಕ ಸಂಸ್ಥೆಗಳಿಂದ ಸಾಲ | 8617.55 | 9732.44 | 8617.55 |
| 3 | ಸ್ಥಳೀಯ ಸಂಸ್ಥೆಗಳ ವಂತಿಕೆ | 985.98 | 1113.54 | 985.95 |
| 4 | ಆರ್.ಡಿ.ಪಿ.ಆರ್.ಇಲಾಖೆಯ ವಂತಿಕೆ | 2052.16 | 2317.67 | 2038.59 |
| | **ಒಟ್ಟು** | **16000.00** | **18070.00** | **15986.40** |

ಯೋಜನೆಗೆ ಈವರೆಗೂ ರೂ. 160.03 ಕೋಟಿಗಳು ವೆಚ್ಚವಾಗಿರುತ್ತದೆ.

**ಆ) ಎರಡನೇ ಹಂತದ ಕಾಮಗಾರಿಗಳು :-** (ಯು.ಐ.ಡಿ.ಎಸ್. ಎಸ್.ಎಂ.ಟಿ ಯೋಜನೆ) ಸರ್ಕಾರದ ಆದೇಶ ಸಂಖ್ಯೆ ನಅಇ 13 ಸಿಎಸ್ಎಸ್ 2006, ದಿನಾಂಕ:16-06-2007 ರಲ್ಲಿ ರೂ.79.92 ಕೋಟಿಗಳು ಮತ್ತು ಆದೇಶ ಸಂಖ್ಯೆ : ನಅಇ 23 ಪಿಆರ್‌ಜೆ 2019, ಬೆಂಗಳೂರು ದಿನಾಂಕ: 16-01-2021 ರಲ್ಲಿ ರೂ.127.76 ಕೋಟಿಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮ ಅನುಮೋದನೆಯನ್ನು ನೀಡಲಾಗಿರುತ್ತದೆ.

ಈ ಯೋಜನೆಯಡಿ ಏರುಕೊಳವೆ ಮಾರ್ಗ, ವಿತರಣಾ ಕೊಳವೆ ಮಾರ್ಗ, ಮೇಲ್ಮಟ್ಟದ ಜಲಸಂಗ್ರಹಾಗಾರಗಳು, ಶುದ್ಧೀಕರಣ ಘಟಕಗಳು ಹಾಗೂ ಪೂರಕ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದ ವಿವರಗಳು ಈ ಕೆಳಗಿನಂತಿದೆ

**ರೂ.ಲಕ್ಷಗಳಲ್ಲಿ**

| ಕ್ರ. ಸಂ | ವಿವರ | ಮೂಲ ಅಂದಾಜಿನಂತೆ | ಪರಿಷ್ಕೃತ ಅಂದಾಜಿ ನಂತೆ | ಬಿಡುಗಡೆ ಯಾದ ಮೊತ್ತ |
|---|---|---|---|---|
| 1 | ಕೇಂದ್ರ ಸರ್ಕಾರದ ಅನುದಾನ | 6394.24 | 6394.24 | 6393.60 |
| 2 | ಕರ್ನಾಟಕ ಸರ್ಕಾರದ ಅನುದಾನ | 799.28 | 799.28 | 784.20 |

| | | | | |
|---|---|---|---|---|
| 3 | ಆರ್ಥಿಕ ಸಂಸ್ಥೆಗಳಿಂದ ಸಾಲ | '- | 4784.00 | 0.00 |
| 4 | ಸ್ಥಳೀಯ ಸಂಸ್ಥೆಗಳ ವಂತಿಕೆ | 799.28 | 799.28 | 703.83 |
| | **ಒಟ್ಟು** | **7992.80** | **12776.40** | **7881.63** |

ಯೋಜನೆಗೆ ಈವರೆಗೂ ರೂ.106.32 ಕೋಟಿಗಳು ವೆಚ್ಚವಾಗಿರುತ್ತದೆ.

| | | |
|---|---|---|
| ಇ) | ಈ ಯೋಜನೆ ಅನುಷ್ಠಾನಗೊಳಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು; (ವಿವರ ನೀಡುವುದು) | **ಅ) 500 ಎಮ್.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟು ಹಾಗೂ ಪೂರಕ ಕಾಮಗಾರಿಗಳ ವಿಳಂಭಕ್ಕೆ ಕಾರಣಗಳು :**<br>1. ಯೋಜನೆಗೆ ಅಗತ್ಯವಾದ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಮತ್ತು ಅರಣ್ಯ ಇಲಾಖೆಯಿಂದ ಅನುಮತಿ ದೊರೆಯುವಲ್ಲಿ 2 ವರ್ಷ 4 ತಿಂಗಳು ವಿಳಂಬವಾದ ಕಾರಣ ಕಾಮಗಾರಿಯನ್ನು 21-03-2013 ರಲ್ಲಿ ಪ್ರಾರಂಬಿಸಲಾಗಿದೆ.<br>2. ಅಣೆಕಟ್ಟು ಅಡಿಪಾಯ ತೆಗೆಯುವ ಸಂದರ್ಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಲ್ಲು ಬಂಡೆಗಳು ದೊರೆತಿರುವುದರಿಂದ ಮತ್ತು ಅಲ್ಲಲ್ಲಿ ಮೆದು ಕಲ್ಲು, ಮೈಕಾ ಹಾಗೂ ಬಿರುಕುಗಳು ಕಂಡುಬಂದಿದ್ದು ಸುರಕ್ಷತೆ ದೃಷ್ಟಿಯಿಂದ ಅಣೆಕಟ್ಟಿನ ಫೌಂಡೇಷನ್ ಮ್ಯಾಪಿಂಗ್ ಹಾಗೂ ಇನ್ ಸಿಟ್ಯೂ ಷಿಯರ್ ಟೆಸ್ಟ್‌ಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರದ ಅಧೀನ ಸಂಸ್ಥೆಯಾದ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ರಾಕ್ ಮೆಕಾನಿಕ್ಸ್ (ಎನ್.ಐ.ಆರ್.ಎಂ) ಇವರಿಗೆ ವಹಿಸಲಾಗಿತ್ತು.<br>3. ಎನ್.ಐ.ಆರ್.ಎಂ ವರದಿಯಂತೆ ಅಣೆಕಟ್ಟೆಯ ಸುರಕ್ಷತೆಯ ದೃಷ್ಟಿಯಿಂದ ಅಣೆಕಟ್ಟು ನಿರ್ಮಾಣದ ಮರುವಿನ್ಯಾಸಕ್ಕೆ ದಿನಾಂಕ:09-02-2018 ರಂದು ಮಂಡಳಿಯ ಸಭೆಯಲ್ಲಿ ಅನುಮೋದನೆ ನೀಡಿರುತ್ತದೆ.<br>4. ಗುತ್ತಿಗೆದಾರರಿಂದ ಆದ ವಿಳಂಬಕ್ಕೆ ಗುತ್ತಿಗೆದಾರರಿಗೆ ರೂ.215.27 ಲಕ್ಷಗಳ ದಂಡ ವಿಧಿಸಲಾಗಿದೆ.<br><br>**ಆ) ಎರಡನೇ ಹಂತದ ಕಾಮಗಾರಿಗಳು (ಯು.ಐ.ಡಿ.ಎಸ್.ಎಸ್.ಎಂ.ಟಿ. ಯೋಜನೆ):**<br>1. ಕೋಲಾರ ನಗರದ 4 ಮೇಲ್ಮಟ್ಟ ಜಲಸಂಗ್ರಹಾಗಾರಗಳು ಮತ್ತು ಬಂಗಾರಪೇಟೆ ಜಲಶುದ್ದೀಕರಣ ಘಟಕ ನಿರ್ಮಾಣಕ್ಕೆ ಅಗತ್ಯವಿದ್ದ ಜಮೀನನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳು ಮಂಡಳಿಗೆ ಹಸ್ತಾಂತರಿಸುವಲ್ಲಿ ವಿಳಂಬವಾಗಿರುತ್ತದೆ.<br>2. ಬಂಗಾರಪೇಟೆ-ಕೋಲಾರ, ಬಂಗಾರಪೇಟೆ-ಮಾಲೂರು ನಡುವೆ ಕೊಳವೆ ಮಾರ್ಗಗಳನ್ನು ಅಳವಡಿಸಲು ರೈಲ್ವೆ ಇಲಾಖೆಯ ವತಿಯಿಂದ ಅನುಮತಿ ನೀಡುವಲ್ಲಿ ವಿಳಂಬ ಉಂಟಾಗಿರುತ್ತದೆ.<br>3. ಗುತ್ತಿಗೆದಾರರಿಂದ ಆದ ವಿಳಂಬಕ್ಕೆ ಗುತ್ತಿಗೆದಾರರಿಗೆ ರೂ.217.02 ಲಕ್ಷ ದಂಡ ವಿಧಿಸಲಾಗಿದೆ. |

<table>
<tr>
<td>ಈ)</td>
<td>ಈ ವಿಳಂಬದಿಂದಾಗಿ ಸದರಿ ಯೋಜನೆಗೆ ತಗಲಿರುವ ಹೆಚ್ಚುವರಿ ವೆಚ್ಚ ಎಷ್ಟು (Extra cost than the original cost)</td>
<td>ಮೊದಲನೆ ಹಂತದ ಹಾಗೂ ಎರಡನೇ ಹಂತದ ಯೋಜನೆಗಳಿಗೆ ತಗಲಿರುವ ಹೆಚ್ಚುವರಿ ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ.<br><br><u>ರೂ.ಕೋಟಿಗಳಲ್ಲಿ</u>
<table>
<tr><th>ಕ್ರ. ಸಂ</th><th>ಯೋಜನೆಯ ಹೆಸರು</th><th>ಅಂದಾಜು <u>ಮೊತ್ತ</u></th><th>ಪರಿಷ್ಕೃತ ಅಂದಾಜು <u>ಮೊತ್ತ</u></th><th>ಹೆಚ್ಚುವರಿ <u>ಮೊತ್ತ</u></th></tr>
<tr><td>1</td><td>ಮೊದಲನೇ ಹಂತದ ಯೋಜನೆ</td><td>160.00</td><td>180.70</td><td>20.70</td></tr>
<tr><td>2</td><td>ಎರಡನೇ ಹಂತದ ಯೋಜನೆ</td><td>79.92</td><td>127.76</td><td>47.84</td></tr>
<tr><td></td><td>ಒಟ್ಟು</td><td>239.92</td><td>308.46</td><td>68.54</td></tr>
</table>
</td>
</tr>
<tr>
<td>ಉ)</td>
<td>ಈ ಯೋಜನೆಯನ್ನು ಯಾವ ಸಮಯದೊಳಗೆ ಲೋಕಾರ್ಪಣೆ ಮಾಡಲಾಗುವುದು?</td>
<td>ಪಂಪಿಂಗ್ ಮೆಶಿನರಿ ಹಾಗೂ ಪೈಪ್ ಲೈನ್ ಕಾಮಗಾರಿಗಳನ್ನು ಪರೀಕ್ಷಾರ್ತಕವಾಗಿ ಚಾಲನೆಗೊಳಿಸಲಾಗುತ್ತಿದ್ದು ಸೆಪ್ಟೆಂಬರ್ 2023 ರೊಳಗೆ ಯೋಜನೆಯನ್ನು ಲೋಕಾರ್ಪಣೆ ಮಾಡಲು ಉದ್ದೇಶಿಸಲಾಗಿದೆ.</td>
</tr>
</table>

ಸಂಖ್ಯೆ: ನಅಇ 40 ಯುಎಂಎಸ್ 2023

13/07/2023

(ಬಿ.ಎಸ್.ಸುರೇಶ)

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಬಿ.ಎಸ್ ಸುರೇಶ

**ನಗರಾಭಿವೃದ್ಧಿ [illegible] ಸಚಿವರು**

**([illegible], ಎಸ್‌ಡಿಬಿ ಮತ್ತು ಕೆಯುಐಡಿಎಫ್‌ಡಿ ಸೇರಿದಂತೆ)**